


# ಬೂರುಗುದ ಮರ ಮತ್ತು ಮಾಗಿ

ವರ್ಷವಿಡೀ ಸನ್ಯಾಸಿಯಂತೆ
ನಿಂತಿದ್ದ ಬೂರುಗದ ಮರ
ಮಾಘ ಕಳೆದು ಫಾಲ್ಗುಣ ಬರುವಾಗ
ಆಕಾಶಕ್ಕೇ ಬಾಣ ಬಿಡುವಂತೆ
ಕೆಂಪುಹೂಗಳನ್ನು
ಹೊದ್ದುಕೊಂಡಿದೆ

ಈ ಹೂ ಬಿಡುವಷ್ಟೇ ಮತ್ತು
ಕಳಚಿ ಬೀಳುವಷ್ಟೇ
ಸಹಜವಾಗಿರದು ಪ್ರೇಮ!

ಬಿರು ಬೇಸಿಗೆಯಲ್ಲಿ
ಇಲ್ಲೊಂದು ಮರವೂ ಇದೆಯೆಂಬ
ನೆನಪೂ ಇರುವುದಿಲ್ಲ
ನೆನಪುಗಳಿಗೆ ಯಾವ ಹಂಗು!

ಹೂ ಹಿಡಿದುಕೊಂಡು ಬರುವ
ಪ್ರಿಯತಮರ ಬಗ್ಗೆ ಓದುವಾಗ
ಕೇಳಿದಾಗೆಲ್ಲ
ಹೂವೆಂದರೆ ಅಲರ್ಜಿ
ನೆಗಡಿ ಎನ್ನುವವರದೂ ಒಂದು
ವಾರ್ತೆ!

ಅದೇ
ನಡುಹಗಲಿನ ಗೋಷ್ಠಿಯಲ್ಲಿ
ಮಾತುಗಳೆಲ್ಲ ಮುಗಿದವು
ಎನ್ನುವಂತೆ
ಮೌನ ಚಿಲಕ ಹಾಕಿಕೊಂಡಾಗ
ಗುಲ್‌ಮೊಹರ್ ಹೂಗಳೆಷ್ಟು
ಚೆಂದ ಅನಿಸಿದ್ದು ನಿಜ

ನಿತ್ಯವೂ ಉದುರಿಬಿದ್ದ
ರಾಶಿ ರಾಶಿ ಹೂಗಳೆಲ್ಲ
ಹೊಸಕಿಹೋಗಿ ರಕ್ತ ಹೆಪ್ಪುಗಟ್ಟಿದ
ಕೆಂದಾರಿಯಲ್ಲಿ ಕಾಲೂರುವಾಗ
ನಿಗಿ ನಿಗಿ ಕೆಂಡದ ಹೊಂಡವನ್ನೂ
ರಕ್ತದ ನದಿಯನ್ನೂ ದಾಟಿಸುವ
ಒಂದಾದರೂ ನಾವೆ ಇದ್ದಿರಲೇಬೇಕಲ್ಲ
ಎನ್ನುತ್ತಲೇ ಮತ್ತೊಂದು ಮಾಗಿಗೆ
ಕಾಯುತ್ತೇನೆ...

● ರೇಣುಕಾ ನಿಡಗುಂದಿ

ಕಲೆ: ಡಿ.ಕೆ. ರಮೇಶ್

